ತಯಾರಿಗಳನ್ನು ಮಾಡಿಕೊಳ್ಳಬೇಕಾಗಿತ್ತು. ಮನೆಗೆ ಬೇಕಾಗುವ ದಿನಸಿಗಳನ್ನು ಸಂಗ್ರಹಿಸಿಟ್ಟುಕೊಳ್ಳುವುದು, ಕೊಟ್ಟಿಗೆಯ ಜಾನುವಾರುಗಳಿಗೆ ಬೇಕಾದ ಮೇವು, ಹಿಂಡಿ, ಬೂಸಾಗಳನ್ನು ತಂದಿಟ್ಟುಕೊಳ್ಳುವುದು, ಕೃಷಿಗೆ ಬೇಕಾಗುವ ನೇಗಿಲು, ಹಾರೆ, ಕತ್ತಿ ಮುಂತಾದವುಗಳನ್ನು ಕಮ್ಮಾರರ ಕುಲುಮೆಗೆ ತೆಗೆದುಕೊಂಡು ಹೋಗಿ ಸರಿಮಾಡಿಸಿಕೊಳ್ಳುವುದು, ಅಡಿಕೆ ತೋಟಕ್ಕೆ ಔಷಧ ಹೊಡೆಯಲು ಬೇಕಾಗುವ ಮೈಲುತುತ್ತ, ರಾಳ, ಸುಣ್ಣ ಇತ್ಯಾದಿಗಳನ್ನು ತಂದಿಟ್ಟುಕೊಳ್ಳುವುದು ಮುಂತಾದ ಕೆಲಸಗಳಿರುತ್ತವೆ. ಗದ್ದೆ–ತೋಟಕ್ಕೆ ಹಾಕಲು ಗೊಬ್ಬರದ ಗುಂಡಿಯಿಂದ ಗೊಬ್ಬರವನ್ನು ತೆಗೆದು ಹಾಕಬೇಕಾಗುತ್ತದೆ. ಪೇಟೆಯಿಂದ ತಂದ ಸಾಮಾನುಗಳನ್ನು–ಬೇಳೆಕಾಳು, ಹುಣಿಸೇಹಣ್ಣು, ಉಪ್ಪು, ಬೆಲ್ಲ ಮುಂತಾದವನ್ನು ಮನೆಯ ಹೆಂಗಸರು ಅಚ್ಚುಕಟ್ಟು ಮಾಡಿ, ಬಿಸಿಲಿನಲ್ಲಿ ಒಣಗಿಸಿ ಡಬ್ಬಿಗಳಿಗೆ ತುಂಬಿ, ಬೆಚ್ಚನೆಯ ಸ್ಥಳಗಳಲ್ಲಿಟ್ಟು(ಹೊಗೆಗೂಡಿನ ಸಮೀಪ, ಮೂಡೆ/ಕಲಬಿ)ಕೊಳ್ಳುತ್ತಿದ್ದರು. ಇದರ ಜೊತೆ ವರ್ಷಕ್ಕೆ ಬೇಕಾಗುವಷ್ಟು ಹಪ್ಪಳ, ಸಂಡಿಗೆ, ಉಪ್ಪಿನಕಾಯಿಗಳನ್ನು ಮಾಡಿಟ್ಟುಕೊಳ್ಳಬೇಕಾಗಿತ್ತು. ಶಾಲೆಗೆ ಹೋಗುವ ಮಕ್ಕಳಿಗೆ ಪುಸ್ತಕ, ಸ್ಲೇಟು, ಬಳಪ, ಬಟ್ಟೆ, ಛತ್ರಿ(ರಿಪೇರಿ ಮಾಡಿಸುವುದಿದ್ದರೆ ಅದನ್ನೂ ಕೂಡ) ಇವುಗಳನ್ನು ತಂದಿಡಬೇಕಾಗುತ್ತಿತ್ತು. ಗದ್ದೆತೋಟಗಳಲ್ಲಿ ಕೆಲಸ ಮಾಡುವ ಆಳುಗಳಿಗೆ ಗೊರಬು, ಕಂಬಳಿಗಳನ್ನು ಹೊಂದಿಸಬೇಕಾಗುತ್ತಿತ್ತು. ಪಣತ, ಕಣಜದಲ್ಲಿ ಕೂಡಿಟ್ಟಿದ್ದ ಭತ್ತವನ್ನು ತೆಗೆಸಿ ಗಿರಣಿ(ಮಿಲ್)ಯಲ್ಲಿ ಕೊಟ್ಟು ಅಕ್ಕಿ, ಅವಲಕ್ಕಿ ಮಾಡಿಸುವುದಲ್ಲದೆ, ಅದನ್ನು ಕೇರಿ ತೌಡು, ನುಚ್ಚು ಬೇರೆಯಾಗಿಸಿ ಜಾನುವಾರುಗಳಿಗೆಂದು ತೆಗೆದಿರಿಸಲಾಗುತ್ತಿತ್ತು.

ಮಳೆ ಹಿಡಿಯುವ ಮೊದಲೇ ಬಚ್ಚಲು ಒಲೆಗೆ ಬೇಕಾದ ಸೌದೆ, ಅಡಕೆ ಹಾಳೆ, ಕೊನೆಮಟ್ಟೆಗಳನ್ನು ಸಿದ್ಧಮಾಡಿಕೊಳ್ಳಬೇಕಿತ್ತು. ಆಗೆಲ್ಲ ಎಲ್ಲಾ ಕೆಲಸಗಳಿಗೂ ಸೌದೆಯೇ ಮುಖ್ಯ ಇಂಧನವಾಗಿತ್ತು. ಕಾಡಿಗೆ ಹೋಗಿ ಸೌದೆಗಳನ್ನು, ಜಿಗ್ಗುಗಳನ್ನು ಹೊತ್ತು ತಂದು ಕಟ್ಟಿಗೆ ಕೊಟ್ಟಿಗೆಯಲ್ಲಿ ಜೋಡಿಸಿಕೊಳ್ಳುತ್ತಿದ್ದರು. ಜಾಸ್ತಿ ಇದ್ದಾಗ ಗಾಡಿಯಲ್ಲಿ ಪೇರಿಸಿ ತರುತ್ತಿದ್ದರು. ಊರಿನೊಳಗೆ ಕಟ್ಟಿಗೆಯ ಹೊರೆ ಇರುವ ಗಾಡಿಗಳು ಬರುತ್ತಿದ್ದವು. ಒಂದು ಗಾಡಿ ಕಟ್ಟಿಗೆಗೆ ಇಂತಿಷ್ಟು ಎಂದು ಹಣ ಕೊಡಬೇಕಾಗುತ್ತಿತ್ತು. ಅದರಲ್ಲಿ ಸಣ್ಣ ಗಾತ್ರದ ಸೌದೆಯಿಂದ ಹಿಡಿದು ದಪ್ಪದಾದ ಕುಂಟೆಗಳೂ ಇರುತ್ತಿದ್ದವು. ಹೇಳಿಕಳಿಸಿದಾಗ ಒಂದು ದಿನ ಕೊರಗ ಬಂದು ಎರಡು ಮೂರು ದಿನಗಳವರೆಗೆ ಆ ಕುಂಟೆಗಳನ್ನು ಕೊಡಲಿಯಿಂದ ಚಿಕ್ಕದಾಗಿ ಒಡೆದು, ಕಟ್ಟಿಗೆ ಕೊಟ್ಟಿಗೆಯಲ್ಲಿ ಜೋಡಿಸಿ ಕೊಡುತ್ತಿದ್ದ. ಒಂದು ವೇಳೆ ಹುಲ್ಲು ಅಥವಾ ಸೋಗೆ ಮನೆಗಳಾಗಿದ್ದರೆ ಹಳೆಯದನ್ನು ತೆಗೆದು ಹೊಸ ಹುಲ್ಲು/ಸೋಗೆಯನ್ನು ಹೊಚ್ಚಬೇಕಾಗುತ್ತಿತ್ತು. ಮನೆಯವರು, ಅವರ ಸಂಬಂಧಿಕರು ಎಲ್ಲರೂ ಸೇರಿ ಮೊದಲೇ ಯೋಜಿಸಿದಂತೆ ಒಂದೊಂದು ದಿನ ಒಬ್ಬೊಬ್ಬರ ಮನೆಯ ಮಾಡನ್ನು ಸರಿಮಾಡುವುದಿತ್ತು. ಇದಕ್ಕಾಗಿ ಹುಲ್ಲು, ಸೋಗೆಗಳನ್ನು ಒಟ್ಟುಮಾಡಿಕೊಳ್ಳುತ್ತಿದ್ದರು. ಈಗ ಹುಲ್ಲು/ಸೋಗೆ ಮನೆಗಳು ಹೋಗಿ ಹೆಂಚು, ಕಾಂಕ್ರೀಟ್ ತಾರಸಿಯ ಮನೆಗಳು ಬಂದಿವೆ.

ಪ್ರತಿಯೊಂದು ಋತುವನ್ನೂ ಸಂತೋಷದಿಂದ ಅನುಭವಿಸುತ್ತಿದ್ದ ಕಾಲವೆಂದರೆ ಬಾಲ್ಯ. ಯಾವುದೇ ಜಂಜಾಟಗಳನ್ನು ತಲೆಗೇರಿಸಿಕೊಳ್ಳದೆ ಸದಾ ಆಟದ ಗುಂಗಿನಲ್ಲೇ ಇರುತ್ತಿದ್ದ ದಿನಗಳವು. ಪ್ರಾಥಮಿಕ ಶಾಲೆಯಲ್ಲಿ ಕುಳ್ಳಗಿನ, ತಲೆ ನರೆತ ವಯಸ್ಸಾದ ಟೀಚರ್ 'ಹುಯ್ಯೋ ಹುಯ್ಯೋ ಮಳೆರಾಯ / ಹೂವಿನ ತೋಟಕೆ ನೀರಿಲ್ಲ / ಬಾರೋ ಬಾರೋ ಮಳೆರಾಯ / ಬಾಳೆಯ ತೋಟಕೆ ನೀರಿಲ್ಲ' ಎಂದು ಹೇಳಿಕೊಡುತ್ತಿದ್ದರೆ ನಾವೆಲ್ಲ ರಸ್ತೆಗೂ ಕೇಳುವಂತೆ ಮಳೆಯ ಶಬ್ದವನ್ನೂ ಮೀರಿ ಕಿವಿಗಡಚಿಕ್ಕುವಂತೆ ಕಿರುಚುತ್ತಿದ್ದೆವು. ಪಕ್ಕದ ತರಗತಿಯ ಟೀಚರ್ ನಮ್ಮ ಟೀಚರ್‌ಗೆ, 'ಮಕ್ಕಳಿಗೆ ಸ್ವಲ್ಪ ಮೆಲ್ಲಗೆ ಹೇಳುವಂತೆ ಹೇಳಿ. ನಮಗೆ ತೊಂದರೆಯಾಗುತ್ತದೆ' ಎನ್ನುತ್ತಿದ್ದರು. ಏಕೆಂದರೆ, ನಮ್ಮ ಶಾಲೆ ನಡೆಯುತ್ತಿದ್ದುದು ಮುನಿಸಿಪಾಲಿಟಿಯ ದೊಡ್ಡ ಹಾಲ್‌ನಲ್ಲಿ. ಒಂದರಿಂದ ನಾಲ್ಕನೇ ತರಗತಿಯವರೆಗೆ ಮಧ್ಯೆ ಮಧ್ಯೆ ಸ್ವಲ್ಪ ಜಾಗ ಬಿಟ್ಟು ಮಕ್ಕಳನ್ನು ಕೂರಿಸುತ್ತಿದ್ದರು. ಸಾಲಿನ ತುದಿಯಲ್ಲಿ ಕುಳಿತಿದ್ದಾಗ ನಾವು ಕೈಚಾಚಿದರೆ ಪಕ್ಕದ ತರಗತಿಯ ಸ್ನೇಹಿತೆಯರು! ಎರಡೂ ತರಗತಿಗಳ ಟೀಚರ್ ಇಲ್ಲದಿದ್ದಾಗ ನಾವು ಇನ್ನೊಂದು ತರಗತಿಗೆ ಹೋಗಿ ಕುಳಿತುಕೊಂಡು ಸ್ನೇಹಿತೆಯರ